ಫೋನ್ : 080-22341391
ಫ್ಯಾಕ್ಸ : 080-22341393

ಕರ್ನಾಟಕ ಸರ್ಕಾರ

# ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್

ಸರ್ಕಾರಿ ಮುದ್ರಣ ತಂತ್ರಜ್ಞಾನ ಸಂಸ್ಥೆ ಕಟ್ಟಡ, ಅರಮನೆ ರಸ್ತೆ, ಬೆಂಗಳೂರು - 560 001.

ಕರಾಉಶಿಪ/4ನೇ ಸಾ. ಸಭೆ/2011-12/ 702

ದಿನಾಂಕ: 28/07/2011

ಇವರಿಗೆ,
ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ
ಎಲ್ಲ ಸದಸ್ಯರುಗಳಿಗೆ.

ಮಾನ್ಯರೇ,

ದಿನಾಂಕ 21/07/2011 ರಂದು ಶ್ರೀ. ಡಾ|| ವಿ.ಎಸ್. ಆಚಾರ್ಯ, ಮಾನ್ಯ ಉನ್ನತ ಶಿಕ್ಷಣ, ಯೋಜನೆ ಮತ್ತು ಸಾಂಖ್ಯಿಕ, ಮುಜರಾಯಿ ಹಾಗೂ ಐಟಿ, ಬಿಟಿ ಇಲಾಖೆಯ ಸಚಿವರು ಹಾಗೂ ಅಧ್ಯಕ್ಷರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು ಇವರ ಅಧ್ಯಕ್ಷತೆಯಲ್ಲಿ ಜರುಗಿದ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ನಾಲ್ಕನೆಯ ಸಾಮಾನ್ಯ ಸಭೆಯ ನಡೆವಳಿಗಳನ್ನು ತಮ್ಮ ಅವಗಾಹನೆಗಾಗಿ ಕಳುಹಿಸಲಾಗಿದೆ.

ಈ ಸಭೆಯ ನಡುವಳಿಗಳಿಗೆ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಈ ಪತ್ರದ ದಿನಾಂಕದಿಂದ 10 ದಿನದೊಳಗಾಗಿ ಸಲ್ಲಿಸಲು ಕೋರಲಾಗಿದೆ.

ತಮ್ಮ ವಿಶ್ವಾಸಿ

(ಕೆ.ಎಂ. ಕಾವೇರಿಯಪ್ಪ)
ಕಾರ್ಯನಿರ್ವಾಹಕ ನಿರ್ದೇಶಕರು

ಅಡಕ: ಮೇಲಿನಂತೆ.

ಪ್ರತಿಗಳನ್ನು ಮಾಹಿತಿಗಾಗಿ:

1) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, 6ನೇ ಮಹಡಿ, ಡಾ|| ಅಂಬೇಡ್ಕರ್ ವೀಧಿ, ಬೆಂಗಳೂರು.
2) ಮಾನ್ಯ ಉನ್ನತ ಶಿಕ್ಷಣ ಸಚಿವರ ವಿಶೇಷ ಕರ್ತವ್ಯಾಧಿಕಾರಿಗಳು, ಕರ್ನಾಟಕ ಸರ್ಕಾರ, 3ನೇ ಮಹಡಿ, ಕೊಠಡಿ ಸಂಖ್ಯೆ 315, ವಿಧಾನಸೌಧ, ಬೆಂಗಳೂರು.
3) ಮಾನ್ಯ ಉನ್ನತ ಶಿಕ್ಷಣ ಸಚಿವರ ಆಪ್ತಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ವಿಧಾನಸೌಧ, 3ನೇ ಮಹಡಿ, ಕೊಠಡಿ ಸಂಖ್ಯೆ 315, ಬೆಂಗಳೂರು.
4) ಪರಿಷತ್ತಿನ ಉಪಾಧ್ಯಕ್ಷರ ಆಪ್ತ ಸಹಾಯಕರು, ಅರಮನೆ ರಸ್ತೆ, ಬೆಂಗಳೂರು.

ದಿನಾಂಕ 21/07/2011 ರಂದು ಬೆಳಗ್ಗೆ 11-00 ಘಂಟೆಗೆ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ ಸಭಾಂಗಣದಲ್ಲಿ ಜರುಗಿದ ಉನ್ನತ ಶಿಕ್ಷಣ ಪರಿಷತ್ತಿನ ನಾಲ್ಕನೆಯ ಸಾಮಾನ್ಯ ಸಭೆಯ ನಡವಳಿಗಳು.

<u>ಉಪಸ್ಥಿತ ಸದಸ್ಯರು</u>

| | |
|---|---|
| 1) | ಡಾ|| ವಿ.ಎಸ್. ಆಚಾರ್ಯ,<br>ಮಾನ್ಯ ಸಚಿವರು, ಉನ್ನತ ಶಿಕ್ಷಣ, ಯೋಜನೆ ಮತ್ತು ಸಾಂಖ್ಯಿಕ ಹಾಗೂ ಅಧ್ಯಕ್ಷರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು. |
| 2) | ಡಾ|| ಎಸ್.ಸಿ. ಶರ್ಮಾ,<br>ಕುಲಪತಿಗಳು, ತುಮಕೂರು ವಿಶ್ವವಿದ್ಯಾಲಯ,<br>ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು. |
| 3) | ಪ್ರೊ. ಕೆ.ಎಂ. ಕಾವೇರಿಯಪ್ಪ,<br>ಸದಸ್ಯ ಕಾರ್ಯದರ್ಶಿಗಳು ಮತ್ತು ಕಾರ್ಯನಿರ್ವಾಹಕ ನಿರ್ದೇಶಕರು,<br>ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು. |
| 4) | ಪ್ರೊ. ವಿ.ಜಿ. ತಳವಾರ,<br>ಕುಲಪತಿಗಳು, ಮೈಸೂರು ವಿಶ್ವವಿದ್ಯಾಲಯ. |
| 5) | ಡಾ|| ಹೆಚ್.ಬಿ. ವಾಲೀಕರ್,<br>ಕುಲಪತಿಗಳು, ಕರ್ನಾಟಕ ವಿಶ್ವವಿದ್ಯಾಲಯ. |
| 6) | ಪ್ರೊ. ಈ. ಟಿ. ಪುಟ್ಟಯ್ಯ,<br>ಕುಲಪತಿಗಳು, ಗುಲಬರ್ಗಾ ವಿಶ್ವವಿದ್ಯಾಲಯ. |
| 7) | ಪ್ರೊ. ಟಿ.ಸಿ. ಶಿವಶಂಕರಮೂರ್ತಿ,<br>ಕುಲಪತಿಗಳು, ಮಂಗಳೂರು ವಿಶ್ವವಿದ್ಯಾಲಯ. |
| 8) | ಪ್ರೊ. ಎಸ್. ಎ. ಬಾರಿ,<br>ಕುಲಪತಿಗಳು, ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ. |
| 9) | ಡಾ|| ಎ. ಮುರಿಗೆಪ್ಪ,<br>ಕುಲಪತಿಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ. |
| 10) | ಡಾ|| ಕೆ. ಎಸ್. ರಂಗಪ್ಪ,<br>ಕುಲಪತಿಗಳು, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ,<br>ಮೈಸೂರು. |
| 11) | ಡಾ|| ಗೀತಾ ಬಾಲಿ,<br>ಕುಲಪತಿಗಳು, ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ,<br>ಬಿಜಾಪುರ. |
| 12) | ಪ್ರೊ. ಎಸ್. ಇಂದುಮತಿ,<br>ಕುಲಪತಿಗಳು, ದಾವಣಗೆರೆ ವಿಶ್ವವಿದ್ಯಾಲಯ. |

ಕಾರ್ಯನಿರ್ವಾಹಕ ನಿರ್ದೇಶಕರು
ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್

| | |
|---|---|
| 13) | ಪ್ರೊ. ಬಿ.ಆರ್. ಅನಂತನ್,<br>ಕುಲಪತಿಗಳು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ. |
| 14) | ಪ್ರೊ. ಮಂಜಪ್ಪ ಡಿ. ಹೊಸಮನೆ,<br>ಕುಲಪತಿಗಳು, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ.<br>ಬಳ್ಳಾರಿ. |
| 15) | ಪ್ರೊ. ಮಲ್ಲೆಪುರಂ ಜಿ. ವೆಂಕಟೇಶ್,<br>ಕುಲಪತಿಗಳು, ಸಂಸ್ಕೃತ ವೇದ ವಿಶ್ವವಿದ್ಯಾಲಯ, ಬೆಂಗಳೂರು. |
| 16) | ಪ್ರೊ. ಹೆಚ್. ಮಹೇಶಪ್ಪ,<br>ಕುಲಪತಿಗಳು, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ.<br>ಬೆಳಗಾವಿ. |
| 17) | ಡಾ॥ ಕೆ.ಎಸ್. ಶ್ರೀಪ್ರಕಾಶ್<br>ಕುಲಪತಿಗಳು, ರಾಜೀವ್ ಗಾಂಧೀ ಆರೋಗ್ಯ ವಿಜ್ಞಾನ<br>ವಿಶ್ವವಿದ್ಯಾಲಯ. |
| 18) | ಪ್ರೊ. ಜಿ. ಎಸ್. ಪಾಟೀಲ್,<br>ಕುಲಪತಿಗಳು, ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ.<br>ಹುಬ್ಬಳ್ಳಿ. |
| 19) | ಡಾ॥ ಎಸ್. ಬಿಸಲಯ್ಯ,<br>ವಿಶ್ರಾಂತ ಕುಲಪತಿಗಳು, ಕೃಷಿ ವಿಶ್ವವಿದ್ಯಾಲಯ,<br>ಬೆಂಗಳೂರು. |
| 20) | ಡಾ॥ ಪಿ. ವೆಂಕಟರಾಮಯ್ಯ,<br>ವಿಶ್ರಾಂತ ಕುಲಪತಿಗಳು, ಕುವೆಂಪು ವಿಶ್ವವಿದ್ಯಾಲಯ. |
| 21) | ಡಾ॥ ಎಂ. ಡಿ. ಮುತ್ತಮ್ಮ,<br>ನಿವೃತ್ತ ಕಾಲೇಜು ಶಿಕ್ಷಣ ನಿರ್ದೇಶಕರು, ಬೆಂಗಳೂರು. |
| 22) | ಶ್ರೀ. ಕೆ. ನರಹರಿ,<br>ನಿವೃತ್ತ ಪ್ರೊಫೆಸರ್, ಬಿ.ಎಂ.ಎಸ್. ಇಂಜಿನಿಯರಿಂಗ್ ಕಾಲೇಜು,<br>ಬೆಂಗಳೂರು. |
| 23) | ಡಾ॥ ಎಸ್. ಸುಧಾ,<br>ನಿವೃತ್ತ ಪ್ರಾಂಶುಪಾಲರು, ಮಹಾರಾಣಿ ವಿಜ್ಞಾನ ಕಾಲೇಜು,<br>ಮೈಸೂರು. |
| 24) | ಡಾ॥ ಆರ್.ಎಲ್.ಎಂ. ಪಾಟೀಲ್,<br>ನಿವೃತ್ತ ರಾಜ್ಯಶಾಸ್ತ್ರ ಪ್ರೊಫೆಸರ್, ಬೆಂಗಳೂರು ವಿಶ್ವವಿದ್ಯಾಲಯ. |
| 25) | ಡಾ॥ ಕೆ.ಎಸ್. ನಿಸಾರ್ ಅಹಮದ್,<br>ನಿವೃತ್ತ ಪ್ರೊಫೆಸರ್, ಬೆಂಗಳೂರು. |

| | |
|---|---|
| 26) | ಶ್ರೀಮತಿ, ಲತಾ ಕೃಷ್ಣರಾವ್, ಐಎಎಸ್<br>ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ. |
| 27) | ಶ್ರೀ. ಕೆ. ಹೆಚ್. ಗೋಪಾಲ ಕೃಷ್ಣೆಗೌಡ, ಐಎಎಸ್<br>ಪ್ರಧಾನ ಕಾರ್ಯದರ್ಶಿಗಳು, ವೈದ್ಯಕೀಯ ಶಿಕ್ಷಣ ಇಲಾಖೆ. |
| 28) | ಶ್ರೀ. ಕೆ.ಆರ್. ಶಶಿಧರ್, ಐಎಎಸ್<br>ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ. |
| 29) | ಡಾ॥ ಎ.ಆರ್. ಅರುಣ<br>ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ. |
| 30) | ಶ್ರೀ. ಎಂ. ಕೆ. ಶ್ರೀಧರ್<br>ಸದಸ್ಯ–ಕಾರ್ಯದರ್ಶಿ, ಜ್ಞಾನ ಆಯೋಗ. |
| 31) | ಶ್ರೀ. ಹಿರಿಯಣ್ಣ ಅಂಬಳಿಕೆ<br>ವಿಶೇಷಾಧಿಕಾರಿಗಳು, ಜಾನಪದ ವಿಶ್ವವಿದ್ಯಾಲಯ. |
| 32) | ಶ್ರೀ. ಎ. ರವೀಂದ್ರ, ಐಎಎಸ್, [ನಿ]<br>ಮಾನ್ಯ ಮುಖ್ಯಮಂತ್ರಿಗಳ ಸಲಹೆಗಾರರು,<br>ವಿಧಾನಸೌಧ, ಬೆಂಗಳೂರು. |

ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಉಪಾಧ್ಯಕ್ಷರಾದ ಡಾ॥ ಎಸ್. ಸಿ. ಶರ್ಮಾರವರು ಉಪಸ್ಥಿತರಿದ್ದ ಎಲ್ಲಾ ಸದಸ್ಯರುಗಳಿಗೆ ಸ್ವಾಗತವನ್ನು ಕೋರಿದರು, ನಂತರ ಕಾರ್ಯಸೂಚಿಯನ್ನು ಕೈಗೆತ್ತಿಕೊಳ್ಳಲಾಯಿತು.

ಐಟಂ ನಂ. ( 1 )

ವಿಷಯ: ದಿನಾಂಕ 12.04.2011 ರಂದು ಜರುಗಿದ ಉನ್ನತ ಶಿಕ್ಷಣ ಪರಿಷತ್ತಿನ ಮೂರನೆಯ ಸಾಮಾನ್ಯ ಸಭೆಯ ನಡುವಳಿಗಳನ್ನು ದೃಢೀಕರಿಸುವ ಕುರಿತು.

<u>ಪರಿಷತ್ತಿನ ತೀರ್ಮಾನ:</u>

ಕೆಳಕಂಡ ತಿದ್ದುಪಡಿಯೊಂದಿಗೆ ದಿನಾಂಕ 12.04.2011 ರಂದು ಜರುಗಿದ ಪರಿಷತ್ತಿನ ಸಾಮಾನ್ಯ ಸಭೆಯ ನಡುವಳಿಗಳನ್ನು ದೃಢೀಕರಿಸಲಾಯಿತು.

Item No – 4 Amendments to KSU Act 2000.

a. The words Faculty/School and Dean/Director shall be substituted by the words ‘Faculty’ and ‘Dean’ in Sec. 34 and wherever they appear in the Karnataka State Universities Act – 2000.

b. A new clause Sec 34(18) “A nominated member who abstains from three consecutive meetings without information to the Chairman shall cease to be the member of the Syndicate”, be included.

ಕಾರ್ಯನಿರ್ವಾಹಕ ನಿರ್ದೇಶಕರು
ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್
ಬೆಂಗಳೂರು.

c. A new clause 35(23) – "A nominated member who abstains from three consecutive meetings without information to the Chairman shall cease to be member of the Academic Council" be included.

d. Sec 63 Transfer of Employees: The following clause shall be included:

i) In the case of transfer of employees on their own, consent of Vice-Chancellors of both the Universities to be obtained.

ii) In the case of transfer of employees for administrative reasons the Government could take a decision.

iii) In the case of employee involved in Lokayukta Enquiry and other enquiries ordered by Govt, and Chancellor, the Government may order for deputation of the employee to other universities till the enquiry is completed.

ಐಟಂ ನಂ. ( 2 )

ವಿಷಯ: ವಿವಿಧ ವಿಶ್ವವಿದ್ಯಾಲಯಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳ ಪ್ರವೇಶ, ವಲಸೆ ಇತ್ಯಾದಿ ವಿಷಯಗಳ ಕುರಿತು ಏಕರೂಪದ ಕರಡು ಪರಿನಿಯಮಾವಳಿಗಳನ್ನು ಪರಿಶೀಲಿಸುವ ಕುರಿತು.

ಉಲ್ಲೇಖ: 1) ದಿನಾಂಕ 01.12.2010 ರಂದು ಜರುಗಿದ ಉನ್ನತ ಶಿಕ್ಷಣ ಪರಿಷತ್ತಿನ ಸಭೆಯ ನಡವಳಿಗಳು.

2) ಈ ಕಚೇರಿ ಅಧಿಸೂಚನೆ ಕ್ರಮಾಂಕ ಕರಾಉಶಿಪ/ಸಮಿತಿ/2010–11/368 ದಿನಾಂಕ 7.2.2010.

3) ಪ್ರೊ. ವಿ.ಜಿ. ತಳವಾರ್, ಕುಲಪತಿಗಳು, ಮೈಸೂರು ವಿಶ್ವವಿದ್ಯಾಲಯ ಹಾಗೂ ಸಮಿತಿ ಅಧ್ಯಕ್ಷರ ಪತ್ರದ ದಿನಾಂಕ 01.02.2011.

**ಪರಿಷತ್ತಿನ ತೀರ್ಮಾನ:**

ಸ್ನಾತಕ ಪದವಿಗಳಲ್ಲಿ "Choice Based Credit System" ಅಳವಡಿಸಲು ಹಾಗೂ ಸ್ನಾತಕೋತ್ತರ ಪದವಿಗಳಲ್ಲಿ ಆನರ್ಸ್ ಪದವಿ ನೀಡುವ ಕುರಿತು ಮತ್ತು ಇತರ ವಿಷಯಗಳ ಬಗ್ಗೆ ಪರಿನಿಯಮಾವಳಿಗಳನ್ನು ಪರಿಶೀಲಿಸಿ ಒಂದು ವರದಿಯನ್ನು ಸಲ್ಲಿಸಲು ಪ್ರೊ|| ವಿ.ಜಿ. ತಳವಾರ್ ಅವರ ಅಧ್ಯಕ್ಷತೆಯಲ್ಲಿ ಪ್ರೊ|| ಬಿಸಲಯ್ಯ ಮತ್ತು ಡಾ|| ಗೀತಾಬಾಲಿಯವರನ್ನು ಸದಸ್ಯರನ್ನೊಳಗೊಂಡಂತೆ ಒಂದು ಸಮಿತಿಯನ್ನು ರಚಿಸಲಾಯಿತು. ಸಮಿತಿಯು ಎರಡು ತಿಂಗಳುಗಳ ಅವಧಿಯಲ್ಲಿ ವರದಿಯನ್ನು ಸಲ್ಲಿಸಬೇಕೆಂದು ಸೂಚಿಸಲಾಯಿತು.

ಕಾರ್ಯನಿರ್ವಾಹಕ ನಿರ್ದೇಶಕರು
ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್
ಬೆಂಗಳೂರು.

**ವಿಷಯ ಸಂಖ್ಯೆ ( 3 )**

ವಿಷಯ: ಭಾರತ ಸರ್ಕಾರ ಪ್ರಸ್ತಾಪಿಸಿರುವ The University for Innovation Bill 2011. (ನವೀನಾತ್ಮಕ ವಿಶ್ವವಿದ್ಯಾಲಯಗಳ ವಿಧೇಯಕ – 2011) ಪರಿಶೀಲನೆ ಕುರಿತು.

ಉಲ್ಲೇಖ: (1) ಭಾರತ ಸರಕಾರದ ಮಾನವ ಸಂಪನ್ಮೂಲ ಇಲಾಖೆಯ ಕಾರ್ಯದರ್ಶಿಗಳ ಪತ್ರ ಸಂ. ಎಫ್4-40/2009-ಯು-1(ಎ), ದಿನಾಂಕ : 14.03.2011.

(2) ಕರ್ನಾಟಕ ಸರ್ಕಾರದ ಪತ್ರ ಸಂ. ಇಡಿ 24 ಯುಎಂವಿ 2011 ದಿನಾಂಕ : 05.04.2011.

**ಪರಿಷತ್ತಿನ ತೀರ್ಮಾನ:**

ನವೀನಾತ್ಮಕ ವಿಶ್ವವಿದ್ಯಾಲಯಗಳ ವಿಧೇಯಕ – 2011 (The University for Innovation Bill – 2011) ಪ್ರಸ್ತಾವನೆಗೆ ಒಪ್ಪಿಗೆ ಸೂಚಿಸಿ ಸಚಿವ ಸಂಪುಟಕ್ಕೆ ಶಿಫಾರಸ್ಸು ಮಾಡುವಂತೆ ಸರಕಾರಕ್ಕೆ ಕೋರಲು ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ: ( 4 )**

ವಿಷಯ: ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ ನೀಡುವ ವಿವಿಧ ಸೇವೆಗಳಿಗೆ ನಿಗದಿಪಡಿಸುವ ಸೇವಾ ಶುಲ್ಕದ ಕರಡು ಪರಿನಿಯಮಾವಳಿಗಳ ಪರಿಶೀಲನೆ ಕುರಿತು.

ಉಲ್ಲೇಖ: ದಿನಾಂಕ 12.04.2011 ರಂದು ಜರುಗಿದ ಕಾರ್ಯನಿರ್ವಾಹಕ ಸಮಿತಿಯ ಗೊತ್ತುವಳಿ ಸಂಖ್ಯೆ. 09.

**ಪರಿಷತ್ತಿನ ತೀರ್ಮಾನ:**

ಪ್ರಸ್ತಾವನೆಯನ್ನು ಕೈಬಿಡಲಾಯಿತು.

ಕಾರ್ಯನಿರ್ವಾಹಕ ನಿರ್ದೇಶಕರು
ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್

**ವಿಷಯ ಸಂಖ್ಯೆ: ( 05 )**

ವಿಷಯ: ರಾಜ್ಯ ಸರ್ಕಾರದಿಂದ ಸ್ಥಾಪನೆಯಾದ ಮತ್ತು ಮುಂದೆ ಸ್ಥಾಪನೆಯಾಗಲಿರುವ ವಿಶ್ವವಿದ್ಯಾಲಯಗಳಿಗೆ ರಾಜ್ಯ ಸರ್ಕಾರದಿಂದ ನೀಡುವ ಅನುದಾನ ಹಾಗೂ ಮಾತೃ ವಿಶ್ವವಿದ್ಯಾಲಯದಿಂದ ಚರ-ಸ್ಥಿರ ಆಸ್ತಿಗಳ ಹಸ್ತಾಂತರ, ವಿದ್ಯಾರ್ಥಿಗಳ ಪ್ರವೇಶ ಶುಲ್ಕ ಹಂಚಿಕೆ ಸುಪರ್ದಿನಲ್ಲಿ ಬರುವ ಮಹಾವಿದ್ಯಾಲಯಗಳ ಸಂಲಗ್ನತೆ ಶುಲ್ಕ ಹುದ್ದೆಗಳ ವರ್ಗಾವಣೆ, ಸ್ನಾತಕೋತ್ತರ ಪದವಿಗಳ ಪ್ರವೇಶ ಇತ್ಯಾದಿಗಳ ಕುರಿತು ನಿಖರವಾದ ಮಾರ್ಗದರ್ಶಿ ಸೂತ್ರಗಳನ್ನು ರಚಿಸಿ ಅವುಗಳನ್ವಯ ಅನುದಾನ ಬಿಡುಗಡೆ ಮಾಡುವ ಕುರಿತು.

<u>ಪರಿಷತ್ತಿನ ತೀರ್ಮಾನ:</u>

ಪ್ರಸ್ತಾವನೆಯನ್ನು ಕೈಬಿಡಲಾಯಿತು.

**ವಿಷಯ ಸಂಖ್ಯೆ: ( 6 )**

ವಿಷಯ: ಕರ್ನಾಟಕದಲ್ಲಿ ವಿಶಿಷ್ಟ ಕೇಂದ್ರಗಳನ್ನು (Centre for Excellence) ಸ್ಥಾಪಿಸುವ ಕುರಿತು.

ಉಲ್ಲೇಖ: 1) ಕರ್ನಾಟಕ ಜ್ಞಾನ ಆಯೋಗದ ಶಿಫಾರಸ್ಸು, ದಿನಾಂಕ 20.01.2011.
2) ಸರ್ಕಾರದ ಪತ್ರ ಸಂ. ಇಡಿ 60 ಯುಆರ್‌ಸಿ 2011 ದಿನಾಂಕ: 19.04.2011.

<u>ಪರಿಷತ್ತಿನ ತೀರ್ಮಾನ:</u>

ರಾಜ್ಯದ ಪ್ರತಿಯೊಂದು ವಿಶ್ವವಿದ್ಯಾಲಯವು ಆಯಾ ವಿಶ್ವವಿದ್ಯಾಲಯಗಳಲ್ಲಿ ಸಾಮರ್ಥ್ಯವುಳ್ಳ ವಿಷಯಗಳ ಆಧಾರದ ಮೇಲೆ ವಿಶಿಷ್ಟ ಕೇಂದ್ರಗಳನ್ನು ಸ್ಥಾಪನೆ ಮಾಡುವ ಕುರಿತು ಪ್ರಸ್ತಾವನೆಯನ್ನು ಸಿದ್ಧಪಡಿಸಿ ಸರಕಾರಕ್ಕೆ ಮತ್ತು ಸಂಬಂಧಪಟ್ಟ ಇತರ ಸಂಸ್ಥೆಗಳಿಗೆ ಸಲ್ಲಿಸಬಹುದೆಂದು ತೀರ್ಮಾನಿಸಲಾಯಿತು.

ಕಾರ್ಯನಿರ್ವಾಹಕ ನಿರ್ದೇಶಕರು
ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್
ಬೆಂಗಳೂರು

**ವಿಷಯ ಸಂಖ್ಯೆ: ( 7 )**

ವಿಷಯ: ರಾಜ್ಯದ ವಿವಿಧ ವಿಶ್ವವಿದ್ಯಾಲಯಗಳ ಸ್ನಾತಕ ಮತ್ತು ಸ್ನಾತಕೋತ್ತರ ವ್ಯಾಸಂಗಗಳ ಕಾರ್ಯಕ್ರಮಗಳನ್ನು ನವಚೇತನಗೊಳಿಸುವ ಕುರಿತು.
(Rejuvenation of UG & PG Programmes of various Universities in the State).

ಉಲ್ಲೇಖ: 1) ಕರ್ನಾಟಕ ಜ್ಞಾನ ಆಯೋಗದ ಶಿಫಾರಸ್ಸು ದಿನಾಂಕ 20.01.2011.
2) ಸರ್ಕಾರದ ಪತ್ರ ಸಂ. ಇಡಿ 60 ಯುಆರ್‌ಸಿ 2011 ದಿನಾಂಕ: 19.04.2011.

<u>ಪರಿಷತ್ತಿನ ತೀರ್ಮಾನ:</u>

ಪ್ರತಿಯೊಂದು ವಿಶ್ವವಿದ್ಯಾಲಯವು ತನ್ನ ಸ್ನಾತಕ ಪದವಿಗಳ ವ್ಯಾಸಂಗವನ್ನು ಪುನಃಶ್ಚೇತನಗೊಳಿಸಲು ಆಯಾ ವಿಶ್ವವಿದ್ಯಾಲಯಗಳ ಶೈಕ್ಷಣಿಕ ಮಂಡಳಿಗಳಲ್ಲಿ ಚರ್ಚಿಸಬೇಕೆಂದು ಪರಿಷತ್ತು ಅಭಿಪ್ರಾಯ ಪಟ್ಟಿತು. ಮೈಸೂರು, ಕರ್ನಾಟಕ, ಮತ್ತು ಮಂಗಳೂರು ವಿಶ್ವವಿದ್ಯಾಲಯಗಳ ಕುಲಪತಿಗಳು ಈ ವಿಷಯಕ್ಕೆ ಸಂಬಂಧಿಸಿದಂತೆ ತಮ್ಮ ವಿಶ್ವವಿದ್ಯಾಲಯದ ಅನುಭವಗಳನ್ನು ಹಂಚಿಕೊಂಡರು. ಹಾಗೆಯೇ ವಿಶ್ವವಿದ್ಯಾಲಯಗಳ ಹಣಕಾಸಿನ ಕೊರತೆಯ ಕುರಿತು ಸರಕಾರ ಗಮನ ಕೊಡಬೇಕು ಹಾಗೂ ವಿಶ್ವವಿದ್ಯಾಲಯಗಳಲ್ಲಿ ಖಾಲಿ ಹುದ್ದೆಗಳ ನೇಮಕಾತಿಯ ವಿಷಯಕ್ಕೆ ಸಂಬಂಧಪಟ್ಟಂತೆ ಸರಕಾರವು ಆದಷ್ಟು ಬೇಗ ಕ್ರಮಕೈಗೊಳ್ಳಬೇಕೆಂದು ಕುಲಪತಿಗಳು ಅಭಿಪ್ರಾಯ ವ್ಯಕ್ತಪಡಿಸಿದರು.

ಉನ್ನತ ಶಿಕ್ಷಣದ ಗುಣಮಟ್ಟದಲ್ಲಿ ಸುಧಾರಣೆಗಳನ್ನು ತರಲು ರಾಜ್ಯ ಉನ್ನತ ಶಿಕ್ಷಣ ಪರಿಷತ್ತು 12ನೇ ಪಂಚವಾರ್ಷಿಕ ಯೋಜನೆಯ ಅವಧಿಗಾಗಿ "ದೂರದೃಷ್ಟಿಯ ದಸ್ತಾವೇಜು" "Vision Document" ಸಿದ್ದಪಡಿಸಲು ಕ್ರಮಕೈಗೊಳ್ಳಬೇಕೆಂದು ಅಭಿಪ್ರಾಯ ಪಟ್ಟಿತು.

**ವಿಷಯ ಸಂಖ್ಯೆ: ( 8 )**

ವಿಷಯ: ರಾಜ್ಯದ ವಿವಿಧ ವಿಶ್ವವಿದ್ಯಾಲಯಗಳ, ಮಹಾವಿದ್ಯಾಲಯಗಳಲ್ಲಿ ಅರ್ಥಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಮತ್ತು ಎಂ.ಫಿಲ್, ಪಿ.ಎಚ್.ಡಿ, ಪದವಿಗಳನ್ನು ಹೊಂದಿರುವ ಉಪನ್ಯಾಸಕರು ಮಾತ್ರ ಬಿ.ಕಾಂ, ಬಿ.ಬಿ.ಎಂ, ಬಿ.ಎಚ್.ಎಂ, ಎಂ.ಬಿ.ಎ, ಕೋರ್ಸುಗಳಲ್ಲಿ ಬರುವ ಅರ್ಥಶಾಸ್ತ್ರ ವಿಷಯವನ್ನು ಭೋಧಿಸುವ ಕುರಿತು ಪ್ರೊ॥ ಬಿಸಲಯ್ಯ ಇವರ ಅಧ್ಯಕ್ಷತೆಯಲ್ಲಿ ರಚಿಸಿದ ಸಮಿತಿ ವರದಿಯ ಬಗ್ಗೆ.

ಉಲ್ಲೇಖ: (1) ಈ ಕಛೇರಿ ಅಧಿಸೂಚನೆ ಸಂ. ಕರಾಉಶಿಪ/ವಾಣಿಜ್ಯ/2010–11/428 ದಿನಾಂಕ : 21.01.2011.
(2) ಪ್ರೊ॥ ಬಿಸಲಯ್ಯ, ಸಮಿತಿಯ ಅಧ್ಯಕ್ಷರು ಇವರ ಪತ್ರ ಮತ್ತು ವರದಿಯ ದಿನಾಂಕ : 06.04.2011.
(3) ಸರ್ಕಾರದ ಪತ್ರ ಕ್ರಮಾಂಕ ಇಡಿ 53 ಯುಆರ್ ಸಿ 2010 ದಿ: 30.05.2011.

<u>ಪರಿಷತ್ತಿನ ತೀರ್ಮಾನ:</u>

ವರದಿಯನ್ನು ಒಪ್ಪಿಕೊಳ್ಳಲಾಯಿತು.

ಕಾರ್ಯನಿರ್ವಾಹಕ ನಿರ್ದೇಶಕರು
ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್

**ವಿಷಯ ಸಂಖ್ಯೆ: ( 9 )**

ವಿಷಯ: ಡಿ.ಇಡಿ ಮತ್ತು ಬಿ.ಎಡ್ ಕೋರ್ಸುಗಳಲ್ಲಿ ಕೊಂಕಣಿ ಭಾಷೆಯನ್ನು ಅಳವಡಿಸುವ ಕುರಿತು.

ಉಲ್ಲೇಖ: 1) ಕೊಂಕಣಿ ಭಾಸ ಆನಿ ಸಂಸ್ಕೃತಿ ಪ್ರತಿಷ್ಠಾನ ಮಾನ್ಯ ಮುಖ್ಯಮಂತ್ರಿಗಳಿಗೆ ಸಲ್ಲಿಸಿದ ಮನವಿ ಪತ್ರ ದಿನಾಂಕ 22.12.2010.

2) ಸರಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ) ಇವರ ಪತ್ರ ಇಡಿ 79 ಯುಎನ್ಇ 2011 ದಿನಾಂಕ 18.04.2011.

**<u>ಪರಿಷತ್ತಿನ ತೀರ್ಮಾನ:</u>**

ಪ್ರಸ್ತಾವನೆಯನ್ನು ಕೈಬಿಡಲಾಯಿತು.

**ವಿಷಯ ಸಂಖ್ಯೆ: ( 10 )**

ವಿಷಯ: ಶಿಕ್ಷಣ ಮಹಾವಿದ್ಯಾಲಯಗಳ ಬಿ.ಎಡ್, ಕೋರ್ಸಿನ ಶೈಕ್ಷಣಿಕ ವೇಳಾಪಟ್ಟಿ ಸಿದ್ಧಪಡಿಸಲು ರಚಿಸಿದ ಸಮಿತಿಯ ವರದಿ ಪರಿಶೀಲಿಸುವ ಕುರಿತು.

ಉಲ್ಲೇಖ: 1) ಈ ಕಛೇರಿ ಅಧಿಸೂಚನೆ ಕ್ರಮಾಂಕ ಕರಾಉಶಿಪ/ಶೈವೇಪ/ಶಿಕ್ಷಣ/2011-12 /554 ದಿನಾಂಕ: 19.04.2011.

2) ಡಾ॥ ಗೀತಾ ಬಾಲಿ, ಕುಲಪತಿಗಳು, ಮಹಿಳಾ ವಿಶ್ವವಿದ್ಯಾಲಯ, ಬಿಜಾಪುರ ಹಾಗೂ ಸಮಿತಿ ಅಧ್ಯಕ್ಷರ ಪತ್ರ ದಿನಾಂಕ: 18.06.2011.

**<u>ಪರಿಷತ್ತಿನ ತೀರ್ಮಾನ:</u>**

ಕೋ ಆರ್ಡಿನೇಷನ್ ಸಮಿತಿ ರಚನಾ ಪದ್ಧತಿಯನ್ನು ರದ್ದುಪಡಿಸಬೇಕೆಂದು ಅಭಿಪ್ರಾಯ ವ್ಯಕ್ತಪಡಿಸಿತು ಮತ್ತು ಉಳಿದಂತೆ ಸಮಿತಿಯ ವರದಿಯನ್ನು ಒಪ್ಪಿಕೊಳ್ಳಲಾಯಿತು. ಅಲ್ಲದೆ ಈ ಶೈಕ್ಷಣಿಕ ವರ್ಷದ ಮಟ್ಟಿಗೆ ಬಿ.ಎಡ್ ಕೋರ್ಸಿನ ಪ್ರವೇಶಕ್ಕೆ ಅಂತಿಮ ದಿನಾಂಕ 15.08.2011 ಎಂದು ನಿಗದಿಪಡಿಸಲಾಯಿತು.

ಕಾರ್ಯನಿರ್ವಾಹಕ ನಿರ್ದೇಶಕರು
ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್
ಬೆಂಗಳೂರು.

**ವಿಷಯ ಸಂಖ್ಯೆ: ( 11 )**

ವಿಷಯ: ಜರ್ಮನಿ ಮತ್ತು ಆಸ್ಟ್ರೀಯಾ ದೇಶಗಳ ವಿಶ್ವವಿದ್ಯಾಲಯಗಳಲ್ಲಿ ಕನ್ನಡ ಅಧ್ಯಯನ ಕೇಂದ್ರ ಪ್ರಾರಂಭಿಸುವ ಬಗ್ಗೆ.

ಉಲ್ಲೇಖ: 1) ಡಾ॥ ಎ.ಹೆಚ್. ಶಿವಯೋಗಿಸ್ವಾಮಿ ಸರ್ಕಾರಿ ಮುಖ್ಯ ಸಚೇತಕರ ಪತ್ರ ದಿನಾಂಕ: 25.01.2011 ಹಾಗೂ 19.02.2011.

2) ಸರ್ಕಾರದ ಪತ್ರ ಸಂ. ಇಡಿ 36 ಯುಎಂವಿ 2011 ದಿನಾಂಕ: 21.06.2011.

**<u>ಪರಿಷತ್ತಿನ ತೀರ್ಮಾನ:</u>**

ವರದಿಗೆ ಒಪ್ಪಿಗೆ ನೀಡಬಹುದೆಂಬುದಾಗಿ ಅಭಿಪ್ರಾಯ ವ್ಯಕ್ತಪಡಿಸಲಾಯಿತು.

**ವಿಷಯ ಸಂಖ್ಯೆ: ( 12 )**

ವಿಷಯ: ಮಹಿಳಾ ಅಧ್ಯಯನದಲ್ಲಿ ಸ್ನಾತಕ–ಸ್ನಾತಕೋತ್ತರ ಪದವಿಗಳನ್ನು ಪಡೆದ ಅಭ್ಯರ್ಥಿಗಳಿಗೆ ಕರ್ನಾಟಕದ ವಿವಿಧ ಇಲಾಖೆಗಳಲ್ಲಿ ನೇಮಕಕ್ಕೆ ಅವಕಾಶ ಕಲ್ಪಿಸುವ ಹಾಗೂ ಇತರ ಬೇಡಿಕೆಗಳ ಕುರಿತು.

ಉಲ್ಲೇಖ: ಸರಕಾರದ ಪತ್ರ ಸಂ. ಇಡಿ 19 ಎಂ ವಿವಿ 2010 ದಿನಾಂಕ: 30.05.2011.

**<u>ಪರಿಷತ್ತಿನ ತೀರ್ಮಾನ:</u>**

ಪ್ರಸ್ತಾವನೆಯನ್ನು ಪರಿಗಣಿಸಿ ಈ ಕುರಿತು ಅಗತ್ಯ ಕ್ರಮಕ್ಕಾಗಿ ಸರಕಾರದ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (DPAR), ಕರ್ನಾಟಕ ಲೋಕಸೇವಾ ಆಯೋಗ (KPSC) ಮತ್ತು ಇತರ ಸಂಬಂಧಿಸಿದ ಸಂಸ್ಥೆ/ಇಲಾಖೆಗಳಿಗೆ ಅಗತ್ಯ ಸೂಚನೆ ನೀಡುವಂತೆ ಕೋರಿ ಸರಕಾರಕ್ಕೆ ಪತ್ರ ಬರೆಯಬೇಕೆಂಬುದಾಗಿ ಅಭಿಪ್ರಾಯ ವ್ಯಕ್ತಪಡಿಸಲಾಯಿತು.

ಕಾರ್ಯನಿರ್ವಾಹಕ ನಿರ್ದೇಶಕರು

**Item No ( 13 )**

Sub: Transfer of Constituent Law Colleges & PG Departments of different Universities to Karnataka State Law University Hubli.

Ref: 1) Govt Notification No. SAMVYASHAE/30/SHANASA/2008 Dt: 20.06.2009.

2) Note No. 957/11 Dt:24.02.2011 of the Hon'ble Minister for Higher Education, Govt of Karnataka.

3) DO Letter No. Law/31/KLM/2011 Dt: 01.07.2011 of the Secretary to Govt, Dept of Law, Justice and Human Rights.

4) Letter No. ED 184 URC 2011 Dt: 19.07.2011 of the Deputy Secretary to Govt, Dept of Higher Education, Bangalore.

<u>ಪರಿಷತ್ತಿನ ತೀರ್ಮಾನ:</u>

ಕಾನೂನು ಶಿಕ್ಷಣ, ವಿಶ್ವವಿದ್ಯಾಲಯಗಳ ವಿವಿಧ ವ್ಯಾಸಂಗಗಳ ಅವಿಭಾಜ್ಯ ಅಂಗವಾಗಿರುವುದರಿಂದ ಆಯಾ ವಿಶ್ವವಿದ್ಯಾಲಯಗಳಲ್ಲಿರುವ ಅಧೀನ ಮಹಾವಿದ್ಯಾಲಯಗಳನ್ನು (Constituted Colleges) ಮತ್ತು ಸ್ನಾತಕೋತ್ತರ ವಿಭಾಗಗಳನ್ನು ಅಲ್ಲಿಯೇ ಉಳಿಸಿಕೊಳ್ಳುವುದು ಸೂಕ್ತ ಎಂಬುದಾಗಿ ಅಭಿಪ್ರಾಯ ವ್ಯಕ್ತಪಡಿಸಲಾಯಿತು.

**Item No ( 14 )**

Sub: Functioning & re-constitution of Local Inquiry Committees of Universities and Process of online application for affiliation.

<u>ಪರಿಷತ್ತಿನ ತೀರ್ಮಾನ:</u>

ಸಂಲಗ್ನತೆಯ ನವೀಕರಣವನ್ನು ಒಂದು ವರ್ಷಕ್ಕಿಂತ ಹೆಚ್ಚಿನ ಅವಧಿಗೆ ಪರಿಗಣಿಸಬಹುದೆಂದು ಪರಿಷತ್ತು ಅಭಿಪ್ರಾಯ ಪಟ್ಟಿತು. ಈ ಕುರಿತು ವಿವರಗಳನ್ನು ಸಿದ್ಧಪಡಿಸಲು ಒಂದು ಸಮಿತಿಯನ್ನು ರಚಿಸಬೇಕೆಂದು ತೀರ್ಮಾನಿಸಲಾಯಿತು. ಹಾಗೆಯೇ ಸ್ಥಳೀಯ ವಿಚಾರಣಾ ಸಮಿತಿಗಳಿಗೆ ಸಿಂಡಿಕೇಟ್ ಸದಸ್ಯರುಗಳನ್ನು ಅಧ್ಯಕ್ಷ/ಸದಸ್ಯರನ್ನಾಗಿ ನೇಮಕ ಮಾಡುವ ವಿಷಯವನ್ನು ವಿವರವಾಗಿ ಚರ್ಚಿಸಿ ಸ್ಥಳೀಯ ವಿಚಾರಣಾ ಸಮಿತಿಗಳಿಗೆ ಸಿಂಡಿಕೇಟ್ ಸದಸ್ಯರುಗಳನ್ನು ಅಧ್ಯಕ್ಷ/ಸದಸ್ಯರನ್ನಾಗಿ ನೇಮಕ ಮಾಡಬಾರದೆಂದು ನಿರ್ಣಯಿಸಲಾಯಿತು.

ಕಾರ್ಯನಿರ್ವಾಹಕ ನಿರ್ದೇಶಕರು
ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು

**Item No ( 15 )**

Sub: Conventional Universities not to take-up Distance Education Programme especially in technical courses with references to the judgement of Supreme Court of India in the case of Prof. Yashpal Vs. State of Chattisgadh and others.

Ref: Letter No. ED 184 URC 2011 Dated: 19.07.2011 of the Deputy Secretary to Govt, Dept of Higher Education, Bangalore.

<u>ಪರಿಷತ್ತಿನ ತೀರ್ಮಾನ:</u>

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ ಮತ್ತು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯಗಳನ್ನೊಳಗೊಂಡಂತೆ ರಾಜ್ಯದ ಯಾವುದೇ ವಿಶ್ವವಿದ್ಯಾಲಯಗಳಲ್ಲಿ ತಾಂತ್ರಿಕ ಕೋರ್ಸುಗಳ ದೂರ ಶಿಕ್ಷಣ ವ್ಯಾಸಂಗಗಳನ್ನು ನೀಡಬಾರದೆಂದು ಅಭಿಪ್ರಾಯ ವ್ಯಕ್ತಪಡಿಸಿತು.

| | | |
|---|---|---|
| ಸಹಿ/– | ಸಹಿ/– | ಸಹಿ/– |
| ಡಾ॥ ವಿ.ಎಸ್. ಆಚಾರ್ಯ | ಡಾ॥ ಎಸ್. ಸಿ. ಶರ್ಮಾ | ಡಾ॥ ಕೆ.ಎಂ. ಕಾವೇರಿಯಪ್ಪ |
| ಅಧ್ಯಕ್ಷರು | ಉಪಾಧ್ಯಕ್ಷರು | ಸದಸ್ಯ–ಕಾರ್ಯದರ್ಶಿಗಳು |